# ಆಯುಷ್ಮಾನ್ ಬಿಚ್ಚಿಟ್ಟ ಕಹಿಸತ್ಯ



■ ವಿಶಾಖ ಎನ್.

ಆಯುಷ್ಮಾನ್ ಖುರಾನಾ ತಮ್ಮ ವೃತ್ತಿಬದುಕನ್ನು ಸಾವಧಾನದಿಂದ ರೂಪಿಸಿಕೊಂಡವರು. 'ವಿಕ್ಕಿ ಡೋನರ್' ಹಿಂದಿ ಸಿನಿಮಾದಿಂದ ಅವರು ಪ್ರವರ್ಧಮಾನಕ್ಕೆ ಬಂದದ್ದು. ಆದರೆ, ಆಮೇಲೆ ತೆರೆಕಂಡ 'ನೌಟನ್ ಕಿ ಸಾಲಾ', 'ಬೇವಕೂಫಿಯಾ', 'ಹವಾಯ್‌ಝಾದಾ' ಮೂರೂ ಮಕಾಡೆಯಾದವು. ಆ ಚಿತ್ರಗಳ ಸೋಲು ಅವರನ್ನು ಕಂಗೆಡಿಸಿದ್ದು ನಿಜ. ಹಾಗೆಂದು ಬಂದ ಅವಕಾಶವನ್ನೆಲ್ಲ ಅವರು ಸ್ವೀಕರಿಸಲಿಲ್ಲ.

ಆ ಸಂದರ್ಭದಲ್ಲಿ ಚಿತ್ರ ನಿರ್ದೇಶಕರೊಬ್ಬರು ಕಥೆಯೊಂದನ್ನು ಹೇಳಿದರು. ಅದು ಆಯುಷ್ಮಾನ್‌ಗೆ ಇಷ್ಟವಾಗಲಿಲ್ಲ. ಆ ಪಾತ್ರ ತಮಗೆ ಬೇಡ ಎಂದು ನಯವಾಗಿ ಹೇಳಿದರು. ಕಥೆ ಹೇಳುವಾಗ ಸಹಜವಾಗಿಯೇ ಮಾತನಾಡಿದ್ದ ನಿರ್ದೇಶಕರು ಆಮೇಲೆ, 'ನಿನಗೆ ಮಾರುಕಟ್ಟೆ ಇಲ್ಲ. ನಿನ್ನ ಸಿನಿಮಾ ಓಡೊಲ್ಲ. ಈ ಚಿತ್ರ ಒಪ್ಪಿಕೊಂಡರೆ ನಿನಗೆ ಉಪಯೋಗವೇ ಹೊರತು ನನಗೆ ನೀನು ಉಪಕಾರ ಮಾಡಿದಂತಲ್ಲ' ಎಂಬ ಧಾಟಿಯಲ್ಲಿ ಏನೇನೋ ಬಡಬಡಿಸಿದರಂತೆ. ಈ ಅನುಭವವನ್ನು ಆಯುಷ್ಮಾನ್ ರೇಡಿಯೋ ಶೋ ಒಂದರಲ್ಲಿ ಇತ್ತೀಚೆಗೆ ಹಂಚಿಕೊಂಡರು.

ಮೂರು ಚಿತ್ರಗಳು ಸೋತಮೇಲೆ 'ದಮ್ ಲಗಾ ಕೆ ಹೈಶಾ' ಹಿಂದಿ ಸಿನಿಮಾ ಹಿಟ್ ಆಯಿತು. ಮತ್ತೆ ಎರಡು ವರ್ಷ ಅವರು ಯಾವ ಚಿತ್ರದಲ್ಲೂ ನಟಿಸಲಿಲ್ಲ. ಚಿತ್ರಕಥೆಯನ್ನು ಕೇಳುತ್ತಿದ್ದರಷ್ಟೆ. ಕ್ರಮೇಣ ಪಾತ್ರವೈವಿಧ್ಯದ ಮೂಲಕವೇ ಅವರು ಗುರುತಾದದ್ದನ್ನು ಕಳೆದ ಕೆಲವು ವರ್ಷಗಳಲ್ಲಿ ನೋಡಿದ್ದೇವೆ.

ಕಳೆದ ವಾರವಷ್ಟೆ ಅವರ ಅಭಿನಯದ 'ಚಂಡೀಗಡ್ ಕರೆ ಆಶಿಕಿ' ಸಿನಿಮಾ ತೆರೆಕಂಡಿತು. ವಾಣಿ ಕಪೂರ್ ಚಿತ್ರದ ನಾಯಕಿ. ಅಭಿಷೇಕ್ ಕಪೂರ್ ನಿರ್ದೇಶನದ ಈ ಚಿತ್ರದಲ್ಲಿ ವೇಟ್‌ಲಿಫ್ಟರ್ ಪಾತ್ರದಲ್ಲಿ ಅವರು ಕಾಣಿಸಿಕೊಂಡಿದ್ದಾರೆ. ಝುಂಬಾ ಹೇಳಿಕೊಡುವವಳು ನಾಯಕಿ. ಇಬ್ಬರ ನಡುವೆ ಪ್ರೇಮಾಂಕುರವಾಗಿ, ಆಮೇಲೆ ಅದು ಅನಿರೀಕ್ಷಿತ ತಿರುವು ಪಡೆದುಕೊಳ್ಳುವ, ಸಣ್ಣ ನಗರಿಯಲ್ಲಿ ನಡೆಯುವ ಕಥೆಯ ಚಿತ್ರವಿದು.

ಈಗ ಆಯುಷ್ಮಾನ್ ಪುರುಸೊತ್ತಿಲ್ಲದ ನಟ. 2019ರಲ್ಲಿ 'ಅಂಧಾಧುನ್' ಸಿನಿಮಾದ ನಟನೆಗೆ ರಾಷ್ಟ್ರಪ್ರಶಸ್ತಿ ಸಂದಮೇಲೆ ಅವರತ್ತ ಬರುತ್ತಿರುವ ಪಾತ್ರಗಳಲ್ಲಿ ಇನ್ನಷ್ಟು ಹೊಸತನ ಕಾಣತೊಡಗಿದೆ. ಅನುಭವ್ ಸಿನ್ಹ ನಿರ್ದೇಶನದ 'ಅನೇಕ್', ಅನುಭೂತಿ ಕಶ್ಯಪ್ ಆ್ಯಕ್ಷನ್–ಕಟ್ ಹೇಳಲಿರುವ 'ಡಾಕ್ಟರ್ ಜಿ' ಅವರು ಒಪ್ಪಿಕೊಂಡಿರುವ ಇನ್ನೆರಡು ಮುಖ್ಯ ಚಿತ್ರಗಳು. ಆನಂದ್ ಎಲ್. ರೈ ನಿರ್ಮಾಣದ ಸಿನಿಮಾಗೂ ಅವರು ನಾಯಕನಾಗುವ ಸಾಧ್ಯತೆ ಇದೆ. ಮೂವತ್ತೇಳು ವಯಸ್ಸಿನ ನಟನ ಈ ಸಿನಿಪಯಣವಂತೂ ಆಸಕ್ತಿಕರವಾಗಿದೆ. ■

## ವಿಕ್ರಮ್‌ಗೆ ಪಾ.ರಂಜಿತ್ ನಿರ್ದೇಶನ

'ಚಿಯಾನ್61' ಎನ್ನುವುದು ತಾತ್ಕಾಲಿಕವಾಗಿ ಇಟ್ಟಿರುವ ಶೀರ್ಷಿಕೆ. ಪಾ. ರಂಜಿತ್ ನಿರ್ದೇಶಕ. 'ಸಾರ್‌ಪಟ್ಟ ಪರಂಪರೈ' ತಮಿಳು ಸಿನಿಮಾ ಮೂಲಕ ದಮನಿತರ ದನಿಯನ್ನು ಬಾಕ್ಸಿಂಗ್ ಪರಂಪರೆಯೊಂದಿಗೆ ಹೇಳಿದ್ದ ರಂಜಿತ್ ತಮ್ಮತನದಿಂದ ಗುರುತಾದವರು. ಅವರು ಈ ಹೊಸಚಿತ್ರಕ್ಕೆ ನಿರ್ದೇಶಿಸಲಿರುವ ನಟ ವಿಕ್ರಮ್ ಎನ್ನುವುದು ವಿಶೇಷ. ಇದೂ ತಮಿಳಿನ ಚಿತ್ರ.

ಕೆ.ಇ. ಗುಣವೇಲ್‌ರಾಜ ನಿರ್ಮಿಸಲಿರುವ ಈ ಚಿತ್ರಕ್ಕೆ ತಾರಾಗಣವನ್ನು ಇನ್ನೂ ಗೊತ್ತುಪಡಿಸಬೇಕಿದೆ. ಸಾಮಾಜಿಕ ಜಾಲತಾಣದಲ್ಲಿ ಚಿತ್ರ ಸೆಟ್ಟೇರಲಿರುವ ಕುರಿತ ಮಾಹಿತಿಯನ್ನು ವಿಕ್ರಮ್ ಹಾಗೂ ಪಾ. ರಂಜಿತ್ ಇಬ್ಬರೂ ತಮ್ಮಿಬ್ಬರ ಫೋಟೊ ಸಮೇತ ಹಂಚಿಕೊಂಡರು. ಈ ಚಿತ್ರದ ಬಗೆಗೆ ತಾವು ಉತ್ಸಾಹದಲ್ಲಿ ಇರುವುದಾಗಿ ರಂಜಿತ್ ತಮ್ಮ ಪೋಸ್ಟ್‌ನಲ್ಲಿ ಬರೆದುಕೊಂಡಿದ್ದಾರೆ.

ತಮ್ಮ ಮಗ ಧ್ರುವ್ ವಿಕ್ರಮ್ ಜತೆ 'ಮಹಾನ್' ತಮಿಳು ಸಿನಿಮಾದಲ್ಲಿ ವಿಕ್ರಮ್ ಅಭಿನಯಿಸಿದ್ದಾರೆ. ಕಾರ್ತೀಕ್ ಸುಬ್ಬರಾಜ್ ನಿರ್ದೇಶಿಸಿರುವ 'ಮಹಾನ್' ಕೂಡ ಗ್ಯಾಂಗ್‌ಸ್ಟರ್ ವಿಷಯವನ್ನು ಒಳಗೊಂಡಿದೆ ಎನ್ನಲಾಗುತ್ತಿದೆ. 'ಜಿಗರ್‌ಥಂಡ', 'ಪೆಟ್ಟಾ', 'ಜಗಮೇ ತಂದಿರನ್' ಸಿನಿಮಾಗಳನ್ನು ಕಾರ್ತೀಕ್ ಸುಬ್ಬರಾಜ್ ನಿರ್ದೇಶಿಸಿದ್ದರು. ವಾಣಿ ಭೋಜನ್ ಪ್ರಮುಖ ಪಾತ್ರದಲ್ಲಿದ್ದು, ಬಾಬಿ ಸಿಂಹ ಕೂಡ ಅಭಿನಯಿಸಿದ್ದಾರೆ. ಈ ಚಿತ್ರದ ಕೆಲಸಗಳು ಪೂರ್ಣಗೊಂಡ ಮೇಲೆ ಪಾ. ರಂಜಿತ್ ನಿರ್ದೇಶನದ ಹೊಸ ಸಿನಿಮಾ ಕಾರ್ಯ ಪ್ರಾರಂಭವಾಗಲಿದೆ. ■

